# ತಿಂಡಿ ಆಯ್ತಾ?



ತಿಂಗಳ ಆ ಮೂರು ದಿನಗಳ ದಿನಚರಿಗಳಲ್ಲಿ ಇದು ಅವನ ಅಚ್ಚುಮೆಚ್ಚು. ಅವಳ ಹೊಟ್ಟೆಯ ಮೇಲೆ ಹಾಟ್ ಬ್ಯಾಗ್‌ನ ಹದವಾದ ಶಾಖ, ಅವನ ತೊಡೆಗಳ ಮೇಲೆ ಅವಳ ಚಾಚಿದ ಕಾಲುಗಳು. ಮೆಲ್ಲನೆ ಅವಳ ಪಾದ ಒತ್ತುತ್ತಿದ್ದವನು, ಕೀಟಲೆ ಮಾಡಲೆಂದು ಅವಳ ಅಂಗಾಲಿಗೆ ಕಚಗುಳಿಯಿಟ್ಟ. ಈ ಹಠಾತ್ ದಾಳಿಯಿಂದ ಸರಕ್ಕನೆ ಕಾಲನ್ನು ಹಿಂದಕ್ಕೆಳೆದುಕೊಂಡ ಅವಳು ಅವನನ್ನು ಒಮ್ಮೆ ದುರುಗುಟ್ಟಿ ನೋಡಿದಳು. ಅವನ ತುಂಟ ಮುಗುಳ್ನಗೆ ಕಂಡ ಕೂಡಲೇ ಸುಕ್ಕಿಟ್ಟ ಹಣೆ ಸಡಿಲಾಗಿ ಅವಳೂ ನಕ್ಕಳು. ಪ್ರತಿ ದಿನ ಹೊಸತನದಲ್ಲಿ ಅವಳನ್ನು ಪ್ರೀತಿಸುತ್ತಿದ್ದ ಅವನು, ಅವಳಲ್ಲಿ ತನ್ನ ಪ್ರಪಂಚವನ್ನೇ ಕಾಣುತ್ತಿದ್ದ.

‘ಅಮ್ಮಿ, ಬೆಳಿಗ್ಗೆ ತಿಂಡಿಗೆ ಅವಲಕ್ಕಿ ಮಾಡ್ಲಾ, ಪುಳಿಯೋಗರೆ ಮಾಡ್ಲಾ ಅಥವಾ ಗುಳಿಯಪ್ಪ ಮಾಡ್ಲಾ?’ ಎಂದು ಅವಳ ಕಣ್ಣನ್ನೇ ಪಿಳಿಪಿಳಿ ನೋಡುತ್ತಿದ್ದ. ಅವನ ಪ್ರೀತಿಯ ಉಪಚಾರದಲ್ಲಿ ಮೈಮರೆತಿದ್ದ ಅವಳು, ಅವನ ಪ್ರಶ್ನೆಗೆ ಕಣ್ಣರಳಿಸಿ ‘ಪುಳಿಯೋಗರೆ’ ಎಂದು ಥಟ್ಟನೆ ಹೇಳಿದಳು. ಹಿಂದೆಯೇ ‘ಬೇಡ ಬೇಡ, ಗುಳಿಯಪ್ಪ ಮಾಡು’ ಎಂದವಳೇ, ಇನ್ನೊಮ್ಮೆ ತಲೆ ಕೊಡವಿ ‘ಅದೆಲ್ಲ ಏನೂ ಬೇಡ, ನೀರ್ ದೋಸೆ ತಿನ್ಬೇಕು ಅನ್ನಿಸ್ತಿದೆ ತುಂಬಾ ದಿನದಿಂದ... ಹೋದ ಸಲ ಕೊಟ್ಟಿಗೆಹಾರಕ್ಕೆ ಹೋದಾಗ ಅಲ್ಲಿ ತಿಂದಿದ್ದೆ ಲಾಸ್ಟು, ಅಲ್ಲಿಗೇ ಕರ್ಕೊಂಡ್ ಹೋಗು ನನ್ನ, ನೀರ್ ದೋಸೆ ತಿನ್ಕೊಂಡು ಬರೋಣ’ ಎಂದು, ಅವನ ಸಮ್ಮತಿಗೆ ಕಾಯುತ್ತಾ ಅದೇ ಅರಳಿದ ಕಣ್ಣುಗಳನ್ನು ಹೊಳೆಪಿಸುತ್ತಾ ಅವನನ್ನೇ ದಿಟ್ಟಿಸಿ ನೋಡುತ್ತಿದ್ದಳು.

‘ಆಹಾಹಾ... ನಿಜ್ವಾಗ್ಲೂ? ಲೇ, ಈಗ ಹೊರಟರೂ ನಾವು ಅಲ್ಲಿಗೆ ಸೇರೋ ಹೊತ್ತಿಗೆ ನಾಳೆ ಮಧ್ಯಾಹ್ನ ಆಗುತ್ತೆ ಬಂಗಾರಿ. ಒಂದ್ ಕೆಲಸ ಮಾಡೋಣ, ನಿನ್ನ ಕೊಟ್ಟಿಗೆಹಾರಕ್ಕೆ ಕರ್ಕೊಂಡು ಹೋಗೋ ಬದ್ಲು, ಕೊಟ್ಟಿಗೆಹಾರನೇ ಇಲ್ಲಿಗೆ ಕರೆಸ್ತೀನಿ ಇರು’ ಎಂದ ಎದೆಯುಬ್ಬಿಸಿ.

ಅರ್ಧ ರಾತ್ರಿಯಲಿ ಎದ್ದು ಡ್ರೈವ್‌ಗೆ ಹೋಗುವ ಅವಳ ಹುನ್ನಾರ ಫಲಿಸಲಿಲ್ಲವಲ್ಲಾ ಎಂಬ ಸಣ್ಣ ನಿರಾಶೆಯ ಛಾಯೆ ಅವಳ ಕಣ್ಣುಗಳಲ್ಲಿ ಮೂಡಿತ್ತು. ಆದರೂ ಸಾವರಿಸಿಕೊಂಡು ‘ಹೂಂ... ನೀ ಕರೆದ ತಕ್ಷಣ ಅದು ಅಲ್ಲಿಂದ ನಡ್ಕೊಂಡು ಬಂದ್ಬಿಡುತ್ತೇ...’ ಎಂದು ಅವಳೂ ಅವನ ಧಾಟಿಯಲ್ಲೇ ಟೀಕಿಸಿದಳು.

‘ಇಲ್ಲ ಚಿನ್ನ, ನಿಂಗೆ ನೀರ್ ದೋಸೆ ಬೇಕು ತಾನೇ... ನಾನೇ ಮಾಡಿಕೊಡ್ತೀನಿ’ ಎಂದನು, ಸಣ್ಣ ಮಗು ಅಮ್ಮನ ಮುಂದೆ ನಿಂತು ಚಾಕೊಲೇಟ್ ಕೇಳಿ ಕಾಯುವ ಹಾಗೆ, ಅವಳ ಸಮ್ಮತಿಗೆ ಕಾಯುತ್ತಾ.

ಅವಳು ಹುಬ್ಬೆಗರಿಸಿ ‘ಬೇಡಪ್ಪ... ಹೋದ ವಾರದ ನಿನ್ನ ಪ್ರತಾಪನ ಕ್ಲೀನ್ ಮಾಡೋ ಹೊತ್ತಿಗೆ ನಂಗೆ ಸಾಕಾಗಿತ್ತು. ಈಗ ನೀರ್ ದೋಸೆ? ಬೇಡ ಬೇಡ’ ಎಂದಳು ನಗುಮಿಶ್ರಿತ ಕಳವಳದ ಧ್ವನಿಯಲ್ಲಿ.

‘ಅದು ಅನಿರೀಕ್ಷಿತ ಅಚಾತುರ್ಯ ಚಿನ್ನ, ಅದ್ರಲ್ಲಿ ನನ್ ತಪ್ಪೇನಿಲ್ಲ, ನಿಜ, ಪ್ರಾಮಿಸ್...’ ಅವಳನ್ನು ನಂಬಿಸುವ ಧ್ವನಿಯಲ್ಲಿ ಚಿಕ್ಕ ಹುಡುಗನಂತೆ ಹೇಳಿದ.

‘ನಿಜ್ವಾಗ್ಲೂ ಮಾಡ್ತೀಯ...? ಇನ್ನೇನೂ ಅನಾಹುತ ಮಾಡಲ್ಲ ತಾನೇ?’ ಅಚ್ಚರಿ ತುಂಬಿದ ಧ್ವನಿಯಲ್ಲಿ ಕೇಳಿದಳು. ಮತ್ತೊಮ್ಮೆ ಮನದಲಿ ನೀರ್ ದೋಸೆ ಆಸೆ ಚಿಗುರಿತ್ತು. ಅವನು ಅವಳತ್ತ ನೋಡಿ ಹಲ್ಕಿರಿದು ತಲೆ ಕೆರೆಯುತ್ತ, ‘ಮಾಡಿ ಕೊಡ್ತೀನಿ ಬಂಗಾರಿ, ಆದ್ರೆ ಹಿಟ್ಟು ಮಾಡೋಕ್ಕೆ ಬರಲ್ಲ ನಂಗೆ’ ಎಂದ.

ಮನಸ್ಸು ಮತ್ತು ನಾಲಿಗೆ ಬಯಸಿದ ನೀರ್ ದೋಸೆ ಗೆದ್ದಿತ್ತು. ತಿನ್ನಲೇಬೇಕೆಂಬ ಹಟಕ್ಕೆ ಸೋತು, ಬಹಳ ಹುರುಪಿನಿಂದ ‘ಹಿಟ್ಟು ಮಾಡೋಕ್ಕೆ ನಾನು ಹೇಳಿಕೊಡ್ತೀನಿ, ಬಾ’ ಎಂದಳು.

ಒತ್ತುತ್ತಿದ್ದ ಅವಳ ಕಾಲುಗಳನ್ನು ಕೆಳಗಿಳಿಸಿ ಅವಳನ್ನು ಎಬ್ಬಿಸಿಕೊಂಡು ಅಡುಗೆಮನೆ ಸೇರಿದರು ಇಬ್ಬರೂ.

ಅಕ್ಕಿ ಡಬ್ಬ ತೆಗೆದು ಪಾವು ತುಂಬಾ ಅಕ್ಕಿ ತುಂಬಿಕೊಂಡು ಬಟ್ಟಲಿಗೆ ಸುರಿಯಲು ಹೋದ ಅವನನ್ನು ತಡೆದು ‘ಇರೋ ಇಬ್ರಿಗೆ ಅಷ್ಟು ಅಕ್ಕಿ ಯಾಕೆ? ಕಾಫಿ ಲೋಟದಲ್ಲಿ ಒಂದೂವರೆ ಕಪ್ ತಗೋ ಸಾಕು’ ಎಂದಳು. ಅವಳು ಕೊಟ್ಟ ಅಳತೆಯನ್ನು ಚಾಚೂತಪ್ಪದೆ ಪರಿಪಾಲಿಸಿ ಬಟ್ಟಲಿಗೆ ಅಕ್ಕಿ ಸುರಿದು ನಲ್ಲಿಯಿಂದ ನೀರು ತುಂಬಿಸಿಕೊಂಡ. ಕರಕರನೆ ಅಂಗೈಗೆ ತಗುಲುತ್ತಿದ್ದ ಕಾಳುಗಳನ್ನು ಕಿವುಚಿ ಕಿವುಚಿ ಬಟ್ಟಲಲ್ಲಿನ ಬಿಳಿ ನೀರು ತಿಳಿ ನೀರಾಗುವವರೆಗೂ ತೊಳೆದೇ ತೊಳೆದ. ಅದಾಗಲೇ ಮೂರು ಸಲ ಆಕಳಿಸಿದ ಅವಳನ್ನು ನೋಡಿ, ಲಗುಬಗೆಯಿಂದ ಆ ಪಾತ್ರೆಯ ಬಾಯಿಗೆ ತಟ್ಟೆ ಮುಚ್ಚಿಟ್ಟು, ಅವಳ ಬಟ್ಟೆಯ ಅಂಚನ್ನು ಎಳೆದುಕೊಂಡು ತನ್ನ ಕೈ ಒರೆಸಿಕೊಂಡು, ಅವಳನ್ನು ಅನಾಮತ್ತು ಎತ್ತಿ ತಂದು ಹಾಸಿಗೆಯ ಮೇಲೆ ಮಲಗಿಸಿದ. ಪಕ್ಕ ಉರುಳಿಕೊಂಡ ಅವನ ತೆರೆದ ತೋಳಿನ ಮೇಲೆ ತಲೆಯಿಟ್ಟು ಅವಳು ನೆಮ್ಮದಿಯ ನಿದ್ರೆಗೆ ಜಾರಿದಳು.